# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

## ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆ ಘಟಕ.

ಕವಿಪ್ರನಿನಿ/ಬಿ. B93/ 35989/ 2016-17 ನಿಗಮ ಕಾರ್ಯಾಲಯ, ಕಾವೇರಿ ಭವನ,

cys. 3 ಬೆಂಗಳೂರು. ದಿನಾಂಕ: 28-04-2017

## ಸುತ್ತೋಲೆ

ವಿಷಯ NDCPS ವಂತಿಗೆ ವಿವರಗಳನ್ನು ನಂತರದ ತಿಂಗಳ 5ನೇ ದಿನಾಂಕದೊಳಗೆ ತಂತ್ರಾಂಶದಲ್ಲಿ ದಾಖಲಿಸುವ ಬಗ್ಗೆ.

ಉಲ್ಲೇಖ ೧. ಈ ಕಛೇರಿ ಪತ್ರದ ಸಂಖ್ಯೆ: ಕವಿಪ್ರನಿನಿ//ಬಿ. B93/ 35989/ 2016-17 / ಸಿವೈಎಸ್-9 ದಿನಾಂಕ 27-09-2016.

೨. ಈ ಕಛೇರಿ ಪತ್ರದ ಸಂಖ್ಯೆ: ಕವಿಪ್ರನಿನಿ//ಬಿ. B93/ 35989/ 2016-17 / ಸಿವೈಎಸ್-10 ದಿನಾಂಕ 04-11-2016

*****

New Defined Contributory Pension Scheme (NDCPS) ಪಿಂಚಣಿ ವಂತಿಗೆ ವಿವರಗಳನ್ನು ಲೆಕ್ಕ ಘಟಕಗಳು ನೇರವಾಗಿ ತಂತ್ರಾಂಶದಲ್ಲಿ ದಾಖಲಿಸುವ ಕಾರ್ಯದ ಪ್ರಗತಿಯನ್ನು ಪರಿಶೀಲಿಸಿದಾಗ ಬಹುತೇಕ ಲೆಕ್ಕ ಘಟಕಗಳು ಅನಗತ್ಯ ವಿಳಂಬ ಮಾಡುತ್ತಿರುವುದನ್ನು ಗಮನಿಸಲಾಗಿದೆ. ಪಿಂಚಣಿ ವಂತಿಗೆ ವಿವರಗಳನ್ನು ತಂತ್ರಾಂಶದಲ್ಲಿ ದಾಖಲಿಸುವ ಕಾರ್ಯವು ಬಹಳ ಸರಳವಾಗಿದ್ದು ಸಂಬಳ ಪಾವತಿ ಮಾಡಲಾದ ಮರುದಿನವೆ ಕೆಲವೇ ಗಂಟೆಗಳಲ್ಲಿ ಪೂರ್ಣಗೊಳಿಸಬಹುದಾಗಿರುತ್ತದೆ.

ಲೆಕ್ಕ ಘಟಕಗಳು ತಂತ್ರಾಂಶದಲ್ಲಿ ದಾಖಲಿಸುವ ಕಾರ್ಯವನ್ನು ಕ್ರಮಬದ್ಧಗೊಳಿಸುವ ಉದ್ದೇಶದಿಂದ ಏಪ್ರಿಲ್ 2017 ರಿಂದ ಪ್ರಾರಂಭಿಸಿ ಪಿಂಚಣಿ ವಂತಿಗೆ ವಿವರಗಳನ್ನು ತಂತ್ರಾಂಶದಲ್ಲಿ ದಾಖಲಿಸುವ ಅವಕಾಶವನ್ನು **ನಂತರದ ತಿಂಗಳ 5ನೇ ದಿನಾಂಕದವರೆಗೂ ಮುಕ್ತವಾಗಿರಿಸಿದ್ದು, ಆ ನಂತರ ಅವಕಾಶವನ್ನು ರದ್ದುಗೊಳಿಸಲಾಗುವುದು.** ಯಾವುದಾದರೂ ಲೆಕ್ಕ ಘಟಕವು ಪಿಂಚಣಿ ವಂತಿಗೆ ವಿವರಗಳನ್ನು ತಂತ್ರಾಂಶದಲ್ಲಿ ಗರಿಷ್ಠ 5ನೇ ದಿನಾಂಕದೊಳಗಾಗಿ ದಾಖಲಿಸದಿದ್ದರೆ ಅಂತಹ ಲೆಕ್ಕ ಘಟಕದ ಲೆಕ್ಕಾಧಿಕಾರಿಗಳು ಖುದ್ದಾಗಿ ಕವಿಪ್ರನಿನಿಯ ನಿಗಮ ಕಛೇರಿಗೆ ಸ್ವಂತ ಖರ್ಚಿನಲ್ಲಿ ಬಂದು ವಿಳಂಬಕ್ಕೆ ಸೂಕ್ತ ಕಾರಣಗಳನ್ನು

EE(IT) 28/4/17 AEE-4 28/4/2017.

ನೀಡಿ ನಿಗಮ ಕಛೇರಿಯ ವಿಶೇಷ ಅನುಮತಿಯನ್ನು ಪಡೆದು ಪಿಂಚಣಿ ವಂತಿಗೆ ವಿವರಗಳನ್ನು ತಂತ್ರಾಂಶದಲ್ಲಿ ದಾಖಲಿಸಬೇಕಾಗುತ್ತದೆ.

ಈ ಮೇಲಿನ ಹಿನ್ನಲೆಯಲ್ಲಿ ಕವಿಪ್ರನಿನಿ ಮತ್ತು ಎಲ್ಲಾ ವಿಸಕಂಗಳ ಲೆಕ್ಕ ಘಟಕಗಳು ಇನ್ನು ಮುಂದೆ ಆಯಾ ತಿಂಗಳ ಪಿಂಚಣಿ ವಂತಿಗೆ ವಿವರಗಳನ್ನು ನಂತರದ ತಿಂಗಳ 5ನೇ ದಿನಾಂಕದೊಳಗೆ ತಂತ್ರಾಂಶದಲ್ಲಿ ದಾಖಲಿಸುವಂತೆ ಸೂಚಿಸಲಾಗಿದೆ. ಈ ನಿಟ್ಟಿನಲ್ಲಿ ವಿಳಂಬವೇನಾದರೂ ಆದಲ್ಲಿ ಅಂತಹ ಲೆಕ್ಕ ಘಟಕಗಳ ಸಂಬಂಧಿಸಿದ ಅಧಿಕಾರಿ / ನೌಕರರ ಮೇಲೆ ಸೂಕ್ತ ಶಿಸ್ತು ಕ್ರಮ ಜರುಗಿಸಲಾಗುವುದು.

ಎಲ್ಲಾ ಕಂಪನಿಗಳ ಆರ್ಥಿಕ ಸಲಹೆಗಾರರು, ನಿಯಂತ್ರಣಾಧಿಕಾರಿಗಳು ಮತ್ತು ಉಪ ನಿಯಂತ್ರಣಾಧಿಕಾರಿಗಳು ತಮ್ಮ ವ್ಯಾಪ್ತಿಯ ಲೆಕ್ಕ ಘಟಕಗಳು ನಿಗಧಿತ ಅವಧಿಯೊಳಗೆ ಪಿಂಚಣಿ ವಂತಿಗೆ ವಿವರಗಳನ್ನು ತಂತ್ರಾಂಶದಲ್ಲಿ ದಾಖಲಿಸುವುದನ್ನು ಖಚಿತ ಪಡಿಸಿಕೊಳ್ಳುವಂತೆ ಸೂಚಿಸಲಾಗಿದೆ.

ನಿರ್ದೇಶಕರು (ಆ ಮತ್ತು ಮಾ.ಸಂ)

ಪ್ರತಿಗಳು:

೧. ವ್ಯವಸ್ಥಾಪಕ ನಿರ್ದೇಶಕರು, ಎಲ್ಲಾ ವಿಸಕಂಗಳು,

೨. ಆರ್ಥಿಕ ಸಲಹೆಗಾರರು, ಕವಿಪ್ರನಿನಿ / ಎಲ್ಲಾ ವಿಸಕಂಗಳು,

೩. ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ ರವರ ಆಪ್ತ ಕಾರ್ಯದರ್ಶಿ ರವರಿಗೆ, ವ್ಯವಸ್ಥಾಪಕ ನಿರ್ದೇಶಕರ ಗಮನಕ್ಕೆ ತರುವಂತೆ ಕೋರಲಾಗಿದೆ.

೪. ವ್ಯವಸ್ಥಾಪಕ ನಿರ್ದೇಶಕರು, ಪಿ.ಸಿ.ಕೆ.ಎಲ್ ರವರ ಆಪ್ತ ಕಾರ್ಯದರ್ಶಿ ರವರಿಗೆ, ವ್ಯವಸ್ಥಾಪಕ ನಿರ್ದೇಶಕರ ಗಮನಕ್ಕೆ ತರುವಂತೆ ಕೋರಲಾಗಿದೆ.

೫. ನಿರ್ದೇಶಕರು (ಹಣಕಾಸು), ಕವಿಪ್ರನಿನಿ ರವರ ಆಪ್ತ ಕಾರ್ಯದರ್ಶಿ ರವರಿಗೆ, ನಿರ್ದೇಶಕರ ಗಮನಕ್ಕೆ ತರುವಂತೆ ಕೋರಲಾಗಿದೆ.

೬. **ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ http:/www.kptcl.com / eprasarana** ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಅ.ಅ (ಐ.ಟಿ ಮತ್ತು ಎಂ ಐ ಎಸ್) ರವರು ವೆಬ್ ಸೈಟ್ ನಲ್ಲಿ ಪ್ರಕಟಿಸಲು ವ್ಯವಸ್ಥೆ ಮಾಡುವಂತೆ ಕೋರಲಾಗಿದೆ.

೭. ಎಲ್ಲಾ ಮುಖ್ಯ ಇಂಜಿನಿಯರ್ ಕವಿಪ್ರನಿನಿ / ಎಸ್ಕಾಂಗಳು

೮. ಎಲ್ಲಾ ಅಧೀಕ್ಷಕ ಇಂಜಿನಿಯರ್ / ನಿಯಂತ್ರಣಾಧಿಕಾರಿ ಕವಿಪ್ರನಿನಿ / ಎಸ್ಕಾಂಗಳು

೯. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್ / ಉಪ ನಿಯಂತ್ರಣಾಧಿಕಾರಿ ಕವಿಪ್ರನಿನಿ / ಎಸ್ಕಾಂಗಳು

೧೦. ಎಲ್ಲಾ ಲೆಕ್ಕಾಧಿಕಾರಿಗಳು ಕವಿಪ್ರನಿನಿ / ಎಸ್ಕಾಂಗಳು

೧೧. ಎಲ್ಲಾ ಲೆಕ್ಕಾಧಿಕಾರಿಗಳು (ಆಂತರಿಕ ತನಿಖೆ) ಕವಿಪ್ರನಿನಿ / ಎಸ್ಕಾಂಗಳು